ರೈಲು ಚಲಿಸಲಾರಂಭಿಸಿತ್ತು, ಇನ್ನೂ ಹತ್ತದೇ ನಿಂತಿದ್ದ ಪ್ರವಾಸಿಗನಿಗೆ ಗಾರ್ಡ್ 'ಬೇಗ ಹತ್ಕೊಳ್ಳಿ...' ಎಂದು ಹೇಳಿದ. 'ಸರಿ, ನಾನು ನನ್ನ ಮಗಳಿಗೆ ಒಂದು ಮುತ್ತು ಕೊಡಬೇಕಿದೆ' ಎಂದು ಯಾತ್ರಿ ಉತ್ತರಿಸಿದ.

ಗಾರ್ಡ್ ರೇಗಿ ಹೇಳಿದ 'ಬೇಗ ಹತ್ತಿಕೊಳ್ರೀ..... ಆ ಕೆಲಸ ನಾನು ಮಾಡ್ತೀನಿ...'

***

ಆಂಜನೇಯ: ಭಕ್ತಾ, ನಿನಗೇನು ವರಬೇಕು, ಕೇಳಿಕೋ...

ಭಕ್ತ: ಪ್ರಭು, ನನಗೆ ಸುಂದರಿಯಾದ ಒಳ್ಳೆಯ ಕನ್ಯೆಯನ್ನು ನೀಡು..

ಆಂಜನೇಯ: ಅಯ್ಯೋ ಮೂರ್ಖ, ನನಗೆ ಅಂಥವಳು ಸಿಕ್ಕಿದ್ದರೆ ನಾನೇಕೆ ಬ್ರಹ್ಮಚಾರಿಯಾಗಿರುತ್ತಿದ್ದೆ?

***

ನಿನ್ನ ಬಹುದೊಡ್ಡ ಶಕ್ತಿ ಯಾವುದು?

ನನ್ನ ಹೆಂಡತಿ

ನಿನ್ನ ಅತಿದೊಡ್ಡ ದೌರ್ಬಲ್ಯ ಯಾವುದು?

ಪಕ್ಕದ ಮನೆಯವರ ಹೆಂಡತಿ.

***

ಸಾರ್, ನಿಮ್ಮ ಧಾರವಾಡ ಪೇಡಾ ಏಕೋ ಸರಿಯಿಲ್ಲ

ಸ್ವಾಮಿ, ಸುಮ್ಮನೇ ಹೇಳಬೇಡಿ, ನೀವು ಹುಟ್ಟುವ ಮೊದಲಿನಿಂದಲೂ ನಾವು ಪೇಡಾ ಮಾಡುತ್ತಿದ್ದೇವೆ.

ಅದೇನೋ ಸರಿ, ಆಗ ಮಾಡಿದ ಪೇಡಾವನ್ನು ಈಗ ಮಾರುವುದು ಸರಿ ಅನಿಸುತ್ತಿಲ್ಲ.




ನಿಮ್ಮ ತಂದೆ, ಏನು ಕೆಲಸ ಮಾಡುತ್ತಾರೆ?

ನನ್ನ ತಂದೆ ನಿತ್ಯ ನಾನಾ ಜನರಿಗೆ ಕಷ್ಟ–ಸಂತಸಗಳನ್ನು ಹಂಚುತ್ತಾರೆ...

ಓ, ಹಾಗಾದರೆ ಅಂತಹ ಮಹಾ ಪುರುಷರೇ ಅವರು?

ಹಾಗೇನಿಲ್ಲ, ಅವರು ಪೋಸ್ಟ್ ಮನ್

***

ಆತ ಜನಪ್ರಿಯ ಚಿತ್ರ ನಿರ್ದೇಶಕ, ಪತ್ನಿಗೆ ಹೆರಿಗೆಯಾಗಿ ವಿಕಲಾಂಗ ಮಗು ಜನಿಸಿತ್ತು.

ನರ್ಸ್ ಫೋನಾಯಿಸಿ ಹೇಳಿದರು 'ಅಭಿನಂದನೆಗಳು ಸರ್, ನಿಮಗೆ ಮಗ ಹುಟ್ಟಿದ್ದಾನೆ, ಆದರೆ ಸೆನ್ಸಾರ್ ಆಗಿ ಬಂದಿದ್ದಾನೆ'.

***

ಮದುವೆ ಮನೆಯಲ್ಲಿ ರೇವತಿಗೆ ಅತ್ತೆ ಮಗ ಕಿಚಾಯಿಸಿದ.

ಏನೇ, ಹುಡುಗ ಸರಿಯಾಗಿದಾನೆ ತಾನೇ?

ಇಲ್ಲ ಕಣೋ, ಹೆಂಡ್ತಿಗೆ ಹೊಡೀತಾನಂತೆ, ಕುಡುಕನಂತೆ,

ಸುಮ್ಮನೇ ತಮಾಷೆಗೆ ಮದುವೆ ಮಾಡ್ಕೋತಿದೀನಿ!

***

ಲೋ ತಿಮ್ಮ, ದೇವಸ್ಥಾನದ ಹೊರಗೆ ನಿಂತು ಪ್ರತಿದಿನ ಒಂದೆರಡು ಗಂಟೆ ಈ ಸಾಲು ಹೇಳು. ನೀನು ಲಕ್ಷಾಧೀಶ್ವರ ಆಗ್ತೀಯ!

ಯಾವುದಪ್ಪಾ ಆ ಸಾಲು?

ಅಮ್ಮಾ ತಾಯಿ, ಬಡವ, ದಾನ ಮಾಡಿ ತಾಯಿ...

(ಸಂಗ್ರಹ) ಕೆ. ಆದಿತ್ಯ ಹೆಬ್ಬಾರ್ ಹರಪನಹಳ್ಳಿ



ಗುಂಡ: ನಿನಗೊಂದು ವಿಷಯ ಗೊತ್ತಾ?

ಗೆಳೆಯ: ಇಲ್ಲ ಅದೇನು ಹೇಳು.

ಗುಂಡ: ನೀನು ನಂಬು ಬಿಡು. ನಾನು ನಮ್ಮಪ್ಪನಿಗೆ ಪ್ರತಿ ತಿಂಗಳೂ ಚೆಕ್ ಕಳುಹಿಸುತ್ತೇನೆ.

ಗೆಳೆಯ: ವೆರಿ ಗುಡ್! ಮಕ್ಕಳು ಅಂದರೆ ಹೀಗಿರಬೇಕು. ಅವರು ಅದರಿಂದ ಹಣ ಡ್ರಾ ಮಾಡಿಕೊಳ್ತಾರಾ?

ಗುಂಡ: ಇಲ್ಲ. ಚೆಕ್ಕಿಗೆ ಸಹಿ ಮಾಡಿ ವಾಪಸ್ ನನಗೆ ಕಳುಹಿಸುತ್ತಾರೆ.

***

ಫೋಟೊಗ್ರಾಫರ್: ಮೇಡಂ ನಿಮ್ಮ ಚಿತ್ರ ದೊಡ್ಡದಾಗಿರಬೇಕೋ ಅಥವಾ ಚಿಕ್ಕದಾಗಿರಬೇಕೋ?

ಮಹಿಳೆ: ಚಿಕ್ಕದಾಗಿರಬೇಕು.

ಫೋಟೊಗ್ರಾಫರ್: ಹಾಗಾದರೆ ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳಿ.

***

ಮಗ: ಅಪ್ಪಾ ಮೇಲೆ ಹಾರಾಡ್ತಾ ಇದೆಯಲ್ಲ ವಿಮಾನ ಅದು ಎಲ್ಲಿಗೆ ಹೋಗ್ತಾ ಇದೆ?

ತಂದೆ: ಸ್ವರ್ಗಕ್ಕೆ

ಮಗ: ಹಾಗಾದರೆ ಅದರಲ್ಲಿರುವವರು ಸ್ವರ್ಗವನ್ನು ಯಾವಾಗ ಮುಟ್ಟುತ್ತಾರೆ?

ತಂದೆ: ಪೆಟ್ರೋಲ್ ಮುಗಿದ ತಕ್ಷಣ.

***

ಗೆಳೆಯ: ಗಂಡ – ಹೆಂಡತಿ ಒಟ್ಟಿಗೆ ಸುಮಾರು ಐವತ್ತು ವರ್ಷ ಜೊತೆಯಾಗಿ ಬಾಳಿದ್ರೆ ನಿನಗೇನು ಅನ್ನಿಸುತ್ತೆ?

ಗುಂಡ: ಆ ಗಂಡನ ಬಗ್ಗೆ ಕನಿಕರ ಹುಟ್ಟಿ ಅಯ್ಯೋ ಪಾಪ ಅನ್ನಿಸುತ್ತೆ.

***



ಗುಂಡ: ಸಾಯೋದರೊಳಗೆ ಒಮ್ಮೆಯಾದರೂ ನಮ್ಮ ದೊಡ್ಡಪ್ಪನ ಒಂದು ಆಸೆ ನೆರವೇರಲೇ ಇಲ್ಲ.

ಗೆಳೆಯ: ಏನಂಥ ಆಸೆ?

ಗುಂಡ: ಒಂದೇ ಒಂದು ಬಾರಿಯಾದರೂ ಅವರ ಹೆಂಡತೀನ ಹೆದರಿಸಬೇಕು ಅಂದುಕೊಂಡಿದ್ದರು.

***

ಗುಂಡ: ಲೇ ನನಗೆ ಹುಷಾರಿಲ್ಲ ಡಾಕ್ಟರನ್ನು ಬರಹೇಳು ಅಂದ್ರೆ ವೆಟರ್ನರಿ ಡಾಕ್ಟರನ್ನ ಬರಹೇಳಿದ್ದೀಯಲ್ಲಾ ಯಾಕೆ?

ಹೆಂಡತಿ: 'ನೀವು ಮಾತೆತ್ತಿದರೆ ಒದಿತೀನಿ, ಒದಿತೀನಿ ಅಂತ ಹೇಳ್ತಾ ಇರ್ತೀರಲ್ಲ. ಒದೆಯೋದು ಕತ್ತೆ ತಾನೇ?' ಅದಕ್ಕೆ ಅವರನ್ನೇ ಕರೆಸಿದೀನಿ.

***

ಗೆಳೆಯ: ಏನೋ ಗುಂಡ ಒಂದೇ ಏಟಿಗೆ ನಿಮ್ಮ ಪಕ್ಕದ ಮನೆ ಸಂಗೀತಾಳನ್ನು ಪ್ರೀತಿಸುವುದನ್ನು ನಿಲ್ಲಿಸಿಬಿಟ್ಟಿದ್ದೀಯಂತೆ ಯಾಕೆ?

ಗುಂಡ: ಹೌದಯ್ಯ! ಆ ಒಂದೇಟು ಅವಳ ಅಣ್ಣನದು.

***

ಗೈಡ್: ನೋಡಿ ಸಾರ್ ಇದೇ ಪೀಸಾ ಓಲುಗೋಪುರ.

ಗುಂಡ: ಅರೆ ಹೌದಾ? ಬಹುಷ: ಇದನ್ನು ನಮ್ಮ ಮನೆ ಕಟ್ಟಿಸಿದವನೇ ಇದನ್ನು ನಿರ್ಮಾಣ ಮಾಡಿರಬೇಕು.

***

ಸರೋಜ: ಸಾರ್ ನಾನು ನನ್ನ ಗಂಡನನ್ನು 365 ದಿನಗಳೂ ನನ್ನ ಅಂಕೆಯಲ್ಲೇ ಹಿಡಿದಿಟ್ಟುಕೊಳ್ಳುವ ಹಾಗಿರಬೇಕು. ಅಂಥಾ ಯಾವುದಾದರೂ ಉಪಾಯವಿದ್ದರೆ ಹೇಳಿ.

ಬಾಸ್: ಇದಕ್ಕೆ ನನಗಿಂತ ನನ್ನ ಹೆಂಡತಿ ಸರಿಯಾದ ಐಡಿಯಾ ಕೊಡುತ್ತಾಳೆ. ನೀವು ಅವಳನ್ನು ಕೇಳಿ.

–ಎಂ.ಕೆ. ಮಂಜುನಾಥ್, ಬೆಂಗಳೂರು